ಕರ್ನಾಟಕ ಸರ್ಕಾರ

ಕ್ರಮ ಸಂಖ್ಯೆ: ಆರ್‌ಡಿ-61-ಎಲ್‌ಆರ್‌ಎಂ-88

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು
ದಿನಾಂಕ: 11-11-1988.

-: ಸುತ್ತೋಲೆ :-

ಅನೇಕ ಭೂ ನ್ಯಾಯಮಂಡಳಿಗಳು ಕೆಲವು ಪ್ರಕರಣಗಳಲ್ಲಿ ಗೇಣಿದಾರರಿಗೆ ಅಧಿಭೋಗ ಧಾರಿಕೆ ಹಕ್ಕನ್ನು ತೀರ್ಮಾನಿಸಿ ಆದೇಶಗಳನ್ನು ಹೊರಡಿಸುವಾಗ 'ಅಳತೆಗೆ ಒಳಪಟ್ಟು' ಎಂಬ ಶರತ್ತಿನೊಡನೆ ಆದೇಶಗಳನ್ನು ಮಾಡಿರುತ್ತಾರೆ. ಅಂತಹ ಪ್ರಕರಣಗಳಲ್ಲಿ ಕಲಮು 48(ಎ) ಪ್ರಕಾರ ವಿಚಾರಣೆ ಕಾಲದಲ್ಲಿಯೇ ಭೂ ನ್ಯಾಯಮಂಡಳಿಗಳ ವಿಸ್ತೀರ್ಣವನ್ನು ನಿಖರವಾಗಿ ಕಳಿಸದೇ ಇರುವುದರಿಂದ ಅಧಿಭೋಗದಾರಿಕೆ ಹಕ್ಕು ಪತ್ರಗಳನ್ನು (ನಮೂನೆ-10) ನೀಡಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಕಲಮು 48(ಎ)(6) ರೀತ್ಯ ತಿದ್ದುಪಡಿ ಮಾಡಲು ಕೂಡ ಭೂ ನ್ಯಾಯ ಮಂಡಳಿಗಳಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ ಸದರಿ ಕಲಮು ಕೇವಲ ಕೈತಪ್ಪು ಮತ್ತು ಕಾಗುಣಿತ ತಪ್ಪುಗಳನ್ನು ತಿದ್ದಲು ಮಾತ್ರವೇ ಇರುತ್ತದೆ.

ಭೂ ನ್ಯಾಯ ಮಂಡಳಿಯ ಆದೇಶಕ್ಕೂ ಮತ್ತು ನಂತರ ಅಳತೆಯಾದ ವಿಸ್ತೀರ್ಣಕ್ಕೂ ವ್ಯತ್ಯಾಸ ಬಂದಲ್ಲಿ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಿಗಳ ಮುಂದೆಯೇ ವಿಷಯ ಇತ್ಯರ್ಥವಾಗಬೇಕಾಗಿರುತ್ತದೆ.

ಮೇಲೆ ಹೇಳಿದ ಸಂದರ್ಭಗಳನ್ನು ನಿವಾರಿಸುವುದಕ್ಕಾಗಿ ಭೂ ನ್ಯಾಯಮಂಡಳಿಗಳು ಇಂತಹ ಶರತ್ತನ್ನು ಒಳಗೊಂಡ ಆದೇಶಗಳನ್ನು ಹೊರಡಿಸಬಾರದು ಎಂದೂ ಮತ್ತು ಅತಿ ಅವಶ್ಯವಿದ್ದಲ್ಲಿ ಅಳತೆ ಮಾಡಿಸಿದ ನಂತರವೇ ಆದೇಶಗಳನ್ನು ಹೊರಡಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಈ ತಿಳುವಳಿಕೆಯ ನಂತರ ಮೇಲೆ ಹೇಳಿದಂತಹ ಯಾವುದೇ ಪ್ರಕರಣಗಳಿಗೂ ಭೂ ನ್ಯಾಯಮಂಡಳಿಗಳು ಅವಕಾಶ ಮಾಡಿಕೊಡುವುದಿಲ್ಲವೆಂದು ಭಾವಿಸಲಾಗಿದೆ.

ಸಹಿ: ( ಜೆ. ಅಲೆಗ್ಸಾಂಡರ್)
9-11-1988.
ಕಂದಾಯ ಆಯುಕ್ತರು.

ಎಲ್ಲಾ ವಿಭಾಗಾಧಿಕಾರಿಗಳಿಗೆ:
ಎಲ್ಲಾ ಜಿಲ್ಲಾಧಿಕಾರಿಗಳಿಗೆ

ನಂ: ಎಲ್.ಆರ್.ಎಫ್-108:88-89

ಜಿಲ್ಲಾಧಿಕಾರಿಯವರ ಕಾರ್ಯಾಲಯ
ಹಾಸನ ಜಿಲ್ಲೆ ಹಾಸನ
ದಿನಾಂಕ: 2-12-1988.

ನಕಲನ್ನು ಜಿಲ್ಲೆಯ ಎಲ್ಲಾ ತಹಶೀಲ್ದಾರರ : ವಿಶೇಷ ತಹಶೀಲ್ದಾರರ ಹಾಗೂ ಚನ್ನರಾಯಪಟ್ಟಣ. ಉಪವಿಭಾಗಾಧಿಕಾರಿಗಳು, ಹಾಸನ ಮತ್ತು ಸಕಲೇಶಪುರ ರವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ - ಹಾಸನ.

ಹಸುನಾ: